ಜಯವಾಗಲಿ, ಅಭಿವೃದ್ಧಿಯ ಹರಿಕಾರ ಭದ್ರಪ್ಪನವರಿಗೆ ಜಯವಾಗಲಿ, ಬಡವರ ಬಂಧು ಭದ್ರಪ್ಪನವರಿಗೆ ಜಯವಾಗಲಿ, ಆಪದ್ಬಾಂಧವ ಭದ್ರಪ್ಪನವರಿಗೆ ಜಯವಾಗಲಿ, ಪಕ್ಷದ ಶಿಸ್ತಿನ ಸಿಪಾಯಿ ಸನ್ಮಾನ್ಯ ಭದ್ರಪ್ಪನವರಿಗೆ ಜಯವಾಗಲಿ, ನಿಮ್ಮ ಓಟು ಸನ್ಮಾನ್ಯ ಭದ್ರಪ್ಪನವರಿಗೇ ಎಂಬ ಘೋಷಣೆಗಳನ್ನು ಕೇಳಿಸಿಕೊಳ್ಳುತ್ತ ಕೆಳಗೆ ನೆಲದಲ್ಲಿ ನಿಂತಿರುವವರೊಬ್ಬರೂ ತಮ್ಮ ಕಣ್ಣಿಂದ ತಪ್ಪಿಸಿಕೊಳ್ಳಬಾರದಂತೆ ಕೀಕೊಟ್ಟ ಗೊಂಬೆಯ ಹಾಗೆ ಎಡಗಡೆಗೂ ಬಲಗಡೆಗೂ ಕತ್ತು ತಿರುಗಿಸುತ್ತ, ಎಲ್ಲ ದಿಕ್ಕುಗಳಲ್ಲಿ ಕಣ್ಣಾಡಿಸುತ್ತ, ಆಗಾಗ ತಮ್ಮತ್ತ ಹಾರಿ ಬಂದ ಹೂಹಾರಗಳನ್ನು ಪುಟ ಹಿಡಿಯುತ್ತ, ಕೆಲವರು ಬಳಿಸಾರಿ ಹಾಕುತ್ತಿದ್ದ ಹಾರಗಳಿಗೆ ತಲೆಯೊಡ್ಡುತ್ತ, ಅಭಿಮಾನಿಗಳಿಗೆ ಕೈಮುಗಿಯುತ್ತ, ಒಂದಿಷ್ಟೂ ಸಿಂಡರಿಸದ ತಮ್ಮ ಮುಖದಲ್ಲಿ ಮಂದಹಾಸವನ್ನು ಚಿಮ್ಮಿಸುತ್ತ ಕೈಮುಗಿಯುತ್ತಿದ್ದರು. ಅವರ ಜುಬ್ಬ, ದಟ್ಟಿಯುಟ್ಟ ಪಂಚೆ ಎಷ್ಟು ಬೆಳ್ಳಗಿದ್ದುವೆಂದರೆ ಸುತ್ತಮುತ್ತ ಇದ್ದವರೆಲ್ಲರ ಮುಖ ಹಠಾತ್ತಾಗಿ ಯಾರೋ ಸರ್ಚ್‌ಲೈಟ್ ಬಿಟ್ಟಂತೆ ಪಳಚ್ಚೆಂದು ಬೆಳಗಿದವೆನ್ನಬೇಕು. ಅವರ ದಪ್ಪ ಮೀಸೆಯ ಅಡಿಯಲ್ಲಿ ಹಲ್ಲುಗಳು ಕಾಣಿಸುವಂತೆ ನಗು; ಕುತ್ತಿಗೆಯಲ್ಲಿ ಹುಲಿಯುಗುರು ಜೋಲುತ್ತಿದ್ದ ಒಂದೆಳೆ ಚಿನ್ನದ ಸರ; ಕೈಬೆರಳುಗಳಲ್ಲಿ ಫಳಫಳವೆನ್ನುತ್ತಿದ್ದ ನಾಲ್ಕು ನಾಲ್ಕು ಉಂಗುರಗಳು; ಬಲ ಮುಂಗೈಗೆ ಕಟ್ಟಿಕೊಂಡ ಕೆಂಪು ಹಳದಿ ದಾರಗಳು. ನಾಲ್ಕು ವರ್ಷಗಳ ಹಿಂದೆ ನಾವೇ ಚುನಾಯಿಸಿದ್ದ ಭದ್ರಪ್ಪನವರು ಅಂದೂ ಹಾಗೆಯೇ ಇದ್ದವರು. ಇವತ್ತು ಮೆರವಣಿಗೆ ನಿಲ್ಲದೆ, ಮುಂದೆ ಸಾಗಲಾರದೆ ಯಾವುದೋ ತಹಬಂದಿಗೆ ಸಿಕ್ಕಿಕೊಂಡ ಹಾಗೆ ಇಂಚಿಂಚೇ ಮುಂದೆ ಸಾಗುತ್ತಿರುವಾಗ ಜನರ ಗುಂಪಿನಿಂದಲೇ ಒಬ್ಬ ಸುತ್ತ ನಿಂತವರನ್ನು ಮೆಲ್ಲನೆ ಪಕ್ಕಕ್ಕೆ ಸರಿಸಿ, ಒಬ್ಬರನ್ನೊಬ್ಬರು ಒತ್ತಿಕೊಂಡು ನಿಂತಿದ್ದವರ ಮಧ್ಯೆ ಹೇಗೋ ತೂರಿಕೊಂಡು ಹೋಗಿ ಅಲ್ಲೇ ಫುಟ್‌ಪಾತಿಗೆ ಹೊಂದಿಕೊಂಡ ಬಂಗಲೆಯ ಕಾಂಪೌಂಡಿಂದ ಹೊರಗೆ ಚಾಚಿ ತಲೆಯಾಡಿಸುತ್ತಿದ್ದ ಗುಲಾಬಿ ಗಿಡಗಳಿಗೆ ಕೈಹಾಕಿ ಹೂಗಳನ್ನು ಕಿತ್ತುಕೊಂಡದ್ದೇ ಆ ಹೂಗಳ ಪಕಳೆಗಳನ್ನು ಒಂದೊಂದಾಗಿ ಕೆಳಗೆ ಬೀಳಿಸುತ್ತ ಮತ್ತೆ ಆ ಜನರ ಮಧ್ಯೆ ಕಾಣಿಸಿಕೊಂಡಾಗ ಅವನನ್ನು ಮಂತ್ರಿ ಭದ್ರಪ್ಪನವರ ಪಕ್ಕದಲ್ಲೇ ಅವರ ಬಾಡಿಗಾರ್ಡಿನಂತೆ ನಿಂತಿದ್ದ, ಸಾಕಷ್ಟು ಊದಿಕೊಂಡಂತಿದ್ದ ಒಬ್ಬ ಆಸಾಮಿ ಗಮನಿಸಿದವನು ಟ್ರಕ್ಕಿನ ಮೇಲಿಂದಲೇ ಕೈಚಾಚಿ ಅವನ ಹಿಡಿಯಲ್ಲಿದ್ದ ಹೂಗಳನ್ನು ತೆಗೆದುಕೊಂಡು ಮಂತ್ರಿಯವರ ಕೈಗಿಟ್ಟಾಗ ಅವರ ಮುಖ ಸಂತೋಷದಿಂದ ಎಷ್ಟೆಲ್ಲ ಉಬ್ಬಿಹೋಯಿತೆಂದು ಕಣ್ಣಾರೆ ನೋಡಿದ ನಮಗಷ್ಟೇ ಗೊತ್ತು.

ಆ ಜಂಗುಳಿಯಲ್ಲೇ ನಾವೆಲ್ಲರೂ ಸಿಕ್ಕಿಕೊಂಡು ಅಕ್ಕ ಪಕ್ಕ ಹಿಂದೆ ಮುಂದೆ ಒಬ್ಬರೊಬ್ಬರ ಒತ್ತಡಕ್ಕೆ ಸಿಲುಕಿಕೊಂಡು ಬೆವರುತ್ತಿರುವ ಮುಖವನ್ನು ಒರೆಸಿಕೊಳ್ಳಲೂ ಆಗದೆ, ಅಲ್ಲಿಂದ ತಪ್ಪಿಸಿಕೊಳ್ಳುವ ದಾರಿಯೂ ಕಾಣದೆ ಒದ್ದಾಡುತ್ತಿರುವಾಗ ಎಷ್ಟೆಂದರೂ ನಾವೂ ಮನುಷ್ಯರೇ ಅಲ್ಲವೇ, ನಮ್ಮಲ್ಲೇ ಯಾರೋ ಒಬ್ಬನ ಪರ್ಸನ್ನು ಲಪಟಾಯಿಸಿ, ಮತ್ತೊಬ್ಬ ಕೈಗೆ ಕಟ್ಟಿಕೊಂಡಿದ್ದ ವಾಚನ್ನು ಕಿತ್ತುಕೊಂಡು, ಮತ್ತಾರದೋ ಕಣ್ಣು ತಂಪುಮಾಡುವ ಕನ್ನಡಕವನ್ನು ಸೆಳೆದುಕೊಂಡು, ಆ ಜಂಗುಳಿಯಲ್ಲೂ ಕಿವಿಗಿಟ್ಟುಕೊಂಡು ಮಾತಾಡುತ್ತಿದ್ದವನ ಸೆಲ್ ಫೋನ್ ಕಸಿದುಕೊಂಡು ನಾವೇ ಒಂದು ಬೆಟ್ಟದಂತೆ ನಿಂತುಬಿಟ್ಟವರು, ಒಬ್ಬರನ್ನೊಬ್ಬರಿಗೆ ಇನ್ನಷ್ಟು ಅಂಟಿಕೊಂಡವರು ಕೂಗುತ್ತ ಕಿರಿಚುತ್ತ ಗದ್ದಲವೆಬ್ಬಿಸುತ್ತಿರುವಾಗ ಮೆರವಣಿಗೆ ಇದ್ದಕ್ಕಿದ್ದಂತೆ ನಿಂತುಬಿಟ್ಟದ್ದೇ ನಮ್ಮಲ್ಲಿ ಕೆಲವರು ರಸ್ತೆ ಬದಿಯ ದೊಡ್ಡ ಮರಗಳಲ್ಲಿ ಬೀಡುಬಿಟ್ಟು ಎಂದಿನಂತೆ ದಾಂಧಲೆ ಮಾಡುತ್ತಿದ್ದ ಕೋತಿಗಳು ಕಮಕ್‌ಕಿಮಕ್ ಎನ್ನದೆ ಮರದ ತುದಿಯಲ್ಲೇ ಮುದುರಿಕೊಂಡು ಕೂತುಬಿಟ್ಟದ್ದನ್ನು ನೋಡಿದೆವು. ಅದಾಗ ರಸ್ತೆಯ ಎರಡೂ ಬದಿಗಳಿಂದ ಏಣಿಯ ಸಮೇತ ನುಗ್ಗಿ ಬಂದ ಕೆಲವರು ಅದನ್ನು ನಿಂತುಬಿಟ್ಟಿದ್ದ ಮಂತ್ರಿಗಳ ಟ್ರಕ್ಕಿಗೆ ಆನಿಸಿ ಒಂದಿಷ್ಟು ಜಾಗ ಮಾಡಿದ್ದೇ ನಾವು ದಿನವೂ ನೋಡುತ್ತಿದ್ದ ಎಳನೀರು ಮಾರುವ ಮುನಿಸಾಮಿ ನಿಧಾನವಾಗಿ ಆ ಏಣಿಯನ್ನು ಹತ್ತಿದಾಗ ಭದ್ರಪ್ಪನವರು ಅವನನ್ನು ನಿರೀಕ್ಷಿಸಿದ್ದವರಂತೆ ಮುಗುಳುನಗುತ್ತ ಕೈಮುಗಿದರು. ಅವನು ಅವರ ಕುತ್ತಿಗೆಗೆ ದಪ್ಪದೊಂದು ಹೂವಿನ ಹಾರ ಹಾಕಿ ಕೈಗೆರಡು ನಿಂಬೆಹಣ್ಣು ಕೊಟ್ಟ. ಭದ್ರಪ್ಪನವರು ಜೋರಾಗಿ ಅವನ ಕೈಕುಲುಕಿ ಅವನನ್ನು